ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly: KOPPA - CHM. ಫೋನ್: 114

5ನೇವರ್ಷ 39ನೇ ಸಂಚಿಕೆ ಕೊಪ್ಪ 21-6-1987 ಭಾನುವಾರ ಬೆಲೆ 50 ಪೈಸೆ

ಅಡ್ಡಗದ್ದೆ: ವಿದ್ಯುತ್ ವ್ಯವಸ್ಥೆ ಅಸಮರ್ಪಕ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಈ ತಾಲ್ಲೂಕಿನ ಅಡ್ಡಗದ್ದೆ ಮತ್ತು ಅಲ್ಲಿಂದ ಬೇಗಾನೆ ಕಡೆಯ ಹಳ್ಳಿಗಳಲ್ಲಿ ವಿದ್ಯುತ್ ಪೂರೈಕೆ ಬಹಳ ಅಸಮರ್ಪಕವಾಗಿದೆ, ಒಂದು ವರ್ಷದ ಹಿಂದೆಯೇ ಈ ದೂರಿನ ಬಗ್ಗೆ ಕ. ವಿ. ಮಂಡಳಿಯ ಬಾಳೆಹೊನ್ನೂರು ಅಧಿಕಾರಿಗಳಿಗೆ ತಿಳಿಸಿದ್ದಕ್ಕೆ ಅವರು 25-6-86ರ ಪತ್ರದಲ್ಲಿ, ಹರಿಹರಪುರದಿಂದ. ಶೃಂಗೇರಿಗೆ ಹೋಗುವ 11 ಕೆ.ವಿ. ಲೈನಿನಲ್ಲಿ ಕೆಲ ಮಾರ್ಪಾಡುಗಳಿಗೆ ಅಂದಾಜು ಪಟ್ಟಿ ಕಳಿಸುವಂತೆ ಶೃಂಗೇರಿಯ ಶಾಖಾಧಿಕಾರಿಗೆ ತಿಳಿಸಿದ್ದರು. ಆದರೆ ಈವರೆಗೂ ಆ ಕೆಲಸ ಆಗಿಲ್ಲ. ಇದಲ್ಲದೆ ಹೊಸಕೊಪ್ಪದಲ್ಲಿ (ಬೇಗಾನೆ) ಇರುವ ನೇರ ಸಂಪರ್ಕಕ್ಕೆ ಫ್ಯೂಸ್ ವ್ಯವಸ್ಥೆ ಇಟ್ಟದ್ದು ಪದೇ ಪದೇ ಫ್ಯೂಸ್ ಹೋದಾಗ ಇಲಾಖೆಯ ಸಿಬ್ಬಂದಿ ಸರಿಪಡಿಸಲು ತುಂಬಾ ತಡ ಮಾಡುತ್ತಾರೆ.

2-3 ತಿಂಗಳ ಹಿಂದೆ ಹರಿಹರಪುರ-ಅಡ್ಡಗದ್ದೆ ಮುಖ್ಯ ಸರಬರಾಜು ಲೈನಿನಲ್ಲಿ ಒಂದು ಕಂಬ ಬಿದ್ದಾಗ ಕೊಟ್ಟಿದ್ದ ತಾತ್ಕಾಲಿಕ ಸಂಪರ್ಕವನ್ನೇ ಮುಂದುವರಿಸಿರುವುದು ಈ ಎಲ್ಲ ತೊಂದರೆಗೆ ಕಾರಣ ಎಂದು ರೈತರ ಭಾವನೆ ಸಂಬಂಧಪಟ್ಟವರು ಈ ಒಂದು ವರ್ಷದ ಮೇಲಾದರೂ ವಿದ್ಯುತ್ ಪೂರೈಕೆ ಸರಿಪಡಿಸಲು ಒತ್ತಾಯಿಸಿದ್ದಾರೆ

ಪುಂಡರ ಜಗಳ, ಕತ್ತಿಯಿಂದ ಕಡಿತ :

ಆರೋಪಿಗಳಿಬ್ಬರ ಸೆರೆ, ಒಬ್ಬ ಪರಾರಿ

ಕೊಪ್ಪ: ಕಳೆದ ಎಂಡು ವರ್ಷಗಳಿಂದ ಇಲ್ಲಿನ ಮನೆ. ಮಾತಾಗಿರುವ ಕುಖ್ಯಾತ ಪುಂಡರ ನಡುವೆ ನಡೆದ ಜಗಳದಲ್ಲಿ ಒಂದು ಗುಂಪು ಇನ್ನೊಬ್ಬನನ್ನು ಕತ್ತಿಯಿಂದ ಕಡಿದು ಗಾಯಗೊಳಿಸಿ ಪರಾರಿಯಾಗುವುದರೊಳಗೆ ಸಬ್ ಇನ್‌ಸ್ಪೆಕ್ಟರ್ ದುರ್ಗಯ್ಯನವರ ಮಿಂಚಿನ ಕಾರ್ಯಾಚರಣೆಯಿಂದ ಇಬ್ಬರು ಸಿಕ್ಕಿ ಬಿದ್ದಿದ್ದಾರೆ. ಒಬ್ಬ ತಲೆ ತಪ್ಪಿಸಿಕೊಂಡಿದ್ದಾನೆ.

ಜೂನ್ 18ರ ಸಂಜೆ 4.45ರ ಸುಮಾರಿಗೆ ಸಿಂಡಿಕೇಟ್ ಬ್ಯಾಂಕ್ ಎದುರಿನ ಕೂಡು ರಸ್ತೆಯ ಅಂಗಡಿಯೊಂದರ ಬಳಿ ಈ ಘಟನೆ ನಡೆದಿದ್ದು, ಪ್ರಕಾಶ ಭಂಡಾರಿ ಎಡ ಭುಜದ ಮೇಲೆ ಎರಡೂವರೆ ಅಂಗುಲ ಆಳ, 6 ಅಂಗುಲ ಉದ್ದದ ಗಾಯದಿಂದ ಆಸ್ಪತ್ರೆ ಸೇರಿದ್ದಾನೆ. ಹಲ್ಲೆ ತಪ್ಪಿಸಲೆತ್ನಿಸಿದ ಸಿಂಡಿಕೇಟ್ ಬ್ಯಾಂಕ್ ಶಂಕರನ ಕೈ ಬೆರಳಿಗೆ ಕತ್ತಿ ಏಟು ಬಿದ್ದಿದೆ. ಹಲ್ಲೆಯ ನೇತೃತ್ವ ವಹಿಸಿದ ಹಂಚಿಕೊಳಲು ಜಯಪ್ರಕಾಶ ಮತ್ತು ಜೊತೆಯಲ್ಲಿದ್ದ ಗುಣವಂತೆ ಈಶ್ವರ ಸೆರೆ ಸಿಕ್ಕಿದ್ದು, ಕತ್ತಿಯಿಂದ ಕಡಿದವನೆನ್ನಲಾದ ಹಂಚಿಕೊಳಲು ದಿನೇಶ ಅಡಗಿದ್ದಾನೆ.

ಹಲ್ಲೆಗೆ ಮತ್ತು ಪರಾರಿಗೆ ಬಳಸಿದ, ತನೂಡಿ ನಾಗರಾಜನ ಜಾವಾ ಬೈಕ್ ಎಂವೈಎಚ್ 852ನ್ನು ವಶಪಡಿಸಿಕೊಳ್ಳಲಾಗಿದೆ ಕಳೆದ ವರ್ಷ ಜಯಪ್ರಕಾಶ ಮತ್ತು ಗುಣವಂತೆ ಪರಮೇಶ್ವರ ಸಬ್‌ಇನ್‌ಸ್ಪೆಕ್ಟರ್‌ರ ಮೇಲೆ ಹತ್ತಿಸಲು ಪ್ರಯತ್ನಿಸಿದ್ದೂ ಇದೇ ಬೈಕನ್ನೇ ಎನ್ನಲಾಗಿದೆ.

ಹಲ್ಲೆ ನಡೆದ ಕೆಲವೇ ನಿಮಿಷಗಳಲ್ಲಿ ಸಬ್ ಇನ್‌ಸ್ಪೆಕ್ಟರಿಗೆ ವಿಷಯ ತಿಳಿದು ತಕ್ಷಣ ದಫೇದಾರ್ ಲಕ್ಕೇಗೌಡರೊಂದಿಗೆ ಆತ ಹೋದ ದಿಕ್ಕನ್ನನುಸರಿಸಿ ಹುಡುಕುತ್ತಾ ಹೋದಾಗ ಕೊಪ್ಪ ಎಸ್ಟೇಟ್ ಬಳಿ ಬೈಕ್ ನಿಲ್ಲಿಸಿಕೊಂಡು, ಬಹುಶಃ ಇನ್ನೊಬ್ಬ ಜೊತೆಗಾರನಿಗಾಗಿ ಕಾಯುತ್ತ ಮರದಡಿ ನಿಂತಿದ್ದ ಇಬ್ಬರು ಆರೋಪಿಗಳು ಸಿಕ್ಕಿಬಿದ್ದರು. ಪ್ರಕಾಶ ತನ್ನನ್ನು ಹಿಡಿದುಕೊಂಡಿದ್ದ ಲಕ್ಕೇಗೌಡರ ಕೈಗೆ ಬಡಿದು ತಪ್ಪಿಸಿಕೊಳ್ಳಲು ಕೊಸರಾಡಿದ ಎನ್ನಲಾಗಿದೆ. ಕುಡಿದು ಟೈಟ್ ಆಗಿದ್ದ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಈತ ಕಳೆದ ಮಂಡಲ ಪಂಚಾಯ್ತಿ ಚುನಾವಣೆಯಲ್ಲಿ ತುಳುವಿನಕೊಪ್ಪ 'ಮಂಡಲಕ್ಕೆ ಸದಸ್ಯನಾಗಿ ಆರಿಸಿ ಬಂದವನೂ ಹೌದು.

ಆರೋಪಿಗಳ ಮೇಲೆ ಕೊಲೆ ಯತ್ನದ ಕೇಸು ದಾಖಲಾಗಿದ್ದು, ದುರ್ಗಯ್ಯ ತನಿಖೆ ಮುಂದುವರಿಸಿದ್ದಾರೆ.

ಮಾಜಿ ಶಾಸಕ ವೀರಪ್ಪಗೌಡರ ನಿಧನ

ಶೃಂಗೇರಿ: ಹನ್ನೊಂದು ವರ್ಷ ಕಾಲ ಶೃಂಗೇರಿ ಕ್ಷೇತ್ರದ ಶಾಸಕರಾಗಿದ್ದ ಧೀಮಂತ ರಾಜಕಾರಣಿ ಕೆ. ಎನ್. ವೀರಪ್ಪಗೌಡರು ಜೂನ್ 16ರಂದು ತಮ್ಮ 71ನೇ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ನಿಧನರಾದರು.

ಜೂನ್ 17ರಂದು ಶೃಂಗೇರಿಯ ಮುಖ್ಯ ಬೀದಿಗಳಲ್ಲಿ ನಡೆದ ಅವರ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ ಸಾವಿರಕ್ಕೂ ಮಿಕ್ಕಿ ಅವರ ಅಭಿಮಾನಿಗಳು, ಬಂಧುಗಳು ಪಾಲ್ಗೊಂಡಿದ್ದರು. ಜಿಲ್ಲೆಯ ಬಹುತೇಕ ರಾಜಕಾರಣಿಗಳು ಇಲ್ಲಿಗೆ ಭೇಟಿ ನೀಡಿ ಮೃತರಿಗೆ ತಮ್ಮ ಅಂತಿಮ ಗೌರವ ಸಲ್ಲಿಸಿದರಲ್ಲದೆ, ಶವಯಾತ್ರೆಯಲ್ಲೂ ಪಾಲ್ಗೊಂಡರು. ಸರ್ಕಾರದ ಪರವಾಗಿ ಜಿಲ್ಲೆಯ ಉನ್ನತ ಅಧಿಕಾರಿಗಳೂ ಆಗಮಿಸಿ ಅಂತಿಮ ಗೌರವ ಸಲ್ಲಿಸಿದರು.

ಅನಂತರ ಪುರಭವನದಲ್ಲಿ ನಡೆದ ಶೋಕ ಸಭೆಯಲ್ಲಿಶಾಸಕ ಗೋವಿಂದಗೌಡರು, ಸಂಸತ್ಸದಸ್ಯೆ ತಾರಾದೇವಿ ಮತ್ತಿತರರು ಮಾತಾನಾಡಿದರು.

ಕಳೆದ 50 ವರ್ಷಗಳಿಂದ ಸಕ್ರಿಯ ರಾಜಕಾರಣದಲ್ಲಿದ್ದ ವೀರಪ್ಪ ಗೌಡರು 7 ವರ್ಷ ಜಿಲ್ಲಾ ಬೋರ್ಡ್ ಉಪಾಧ್ಯಕ್ಷರಾಗಿಯೂ 11ವರ್ಷ ಶೃಂಗೇರಿ ಕ್ಷೇತ್ರದ ಶಾಸಕರಾಗಿಯೂ ಹಲವು ಜನೋಪಯೋಗಿ ಕೆಲಸಗಳನ್ನು ನಿರ್ವಹಿಸಿ ಪ್ರಸಿದ್ಧರಾಗಿದ್ದರು ಕೆಂಗಲ್ ಹನುಮಂತಯ್ಯನವರ ಶಿಷ್ಯರಲ್ಲೊಬ್ಬರಾದ ಅವರು ಕೆಂಗಲ್‌ರಂತೆಯೇ ಒಬ್ಬ ದಕ್ಷ ಆಡಳಿತಗಾರರೆನ್ನಿಸಿಕೊಂಡರು.

ಕಳೆದ ನಾಲ್ಕು ವರ್ಷಗಳಿಂದ ಶಿವಮೊಗ್ಗ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಅಧ್ಯಕ್ಷರಾಗಿ ಬಹಳ ನಿಷ್ಠಾವಂತ ಸೇವೆ ಸಲ್ಲಿಸಿದ್ದ ಅವರ ನಿಧನಕ್ಕೆ ವ್ಯ.ಮಾ.ಸ. ಆಡಳಿತ ಮಂಡಳಿ ಮತ್ತು ನೌಕರ ವೃಂದ ಶೋಕ ವ್ಯಕ್ತಪಡಿಸಿದೆ.

4 ವರ್ಷದ ಹಿಂದೆ ಪತ್ನಿಯನ್ನು ಕಳೆದುಕೊಂಡಿದ್ದ ಗೌಡರು ಇಬ್ಬರು ಗಂಡು ಮಕ್ಕಳನ್ನೂ ಇಬ್ಬರು ಹೆಣ್ಣು ಮಕ್ಕಳನ್ನೂ ಅಗಲಿದ್ದಾರೆ. ಬೆಂಗಳೂರಿನ ಡೆಪ್ಯುಟಿ ಪೋಲೀಸ್ ಕಮಿಷನರ್ ಆಗಿರುವ ಕೆ.ವಿ. ರವೀಂದ್ರನಾಥ ಟಾಗೋರ್ ಇವರ ಹಿರಿಯ ಮಗ.

ನವೋದಯಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬಾಳೆಹೊನ್ನೂರು: ಇಲ್ಲಿಗೆ ಸಮೀಪದ ಕಾಫಿ ಸಂಶೋಧನಾ ಕೇಂದ್ರದಲ್ಲಿರುವ ಕೇಂದ್ರೀಯ 'ನವೋದಯ ಶಾಲೆ'ಗೆ ಸೇರಲು ಪ್ರವೇಶ ಪರೀಕ್ಷೆಗಾಗಿ ಅರ್ಜಿ ಕರೆಯಲಾಗಿದೆ. ಅರ್ಜಿ ನಮೂನೆಗಳು ಎಲ್ಲಾ ಶಾಲೆಗಳ (ಐದನೇ ತರಗತಿ ಇರುವ) ಮುಖ್ಯೋಪಾಧ್ಯಾಯರಲ್ಲಿ, ಎಇಒ ಕಚೇರಿಯಲ್ಲಿ ದೊರೆಯುತ್ತವೆ. ಖಾಲಿ ಫಾರಂ ದೊರೆಯದಿದ್ದವರು ಅರ್ಜಿಯ ಮಾದರಿಯನ್ನು ಯಥಾವತ್ತಾಗಿ ಖಾಲಿ ಕಾಗದದಲ್ಲಿ ಬರೆದು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸುವವರು 5ನೇ ತರಗತಿ ಪಾಸಾಗಿರಬೇಕು.

ಆಯಾ ತಾಲ್ಲೂಕಿನ ಸಹಾಯಕ ಶಿಕ್ಷಣಾಧಿಕಾರಿಗಳ ಕಚೇರಿಗೇ ಅರ್ಜಿ ಸಲ್ಲಿಸಬೇಕಾಗಿದ್ದು, ಇದಕ್ಕಾಗಿ **ಕಡೆಯ ದಿನಾಂಕ: 10-7-1987. ಪ್ರವೇಶ ಪರೀಕ್ಷೆಯ ದಿನಾಂಕ 23.8.1987**

ಶೃಂಗೇರಿ ಚಪ್ಪರದಾಂಜನೇಯ ದೇವಸ್ಥಾನದಲ್ಲಿ

'ಸ್ಟೆಪ್ ಬೈ ಸ್ಟೆಪ್' ತಾರತಮ್ಯ ?!

ದಲಿತರ 'ಧಾರೆ' ದಾರಿಯಲ್ಲಿ !

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಜೂನ್ 7ರಂದು ಇಲ್ಲಿಯ ಚಪ್ಪರದಾಂಜನೇಯ ದೇವಸ್ಥಾನದಲ್ಲಿ ಕಲ್ಕುಳಿಯ ಹರಿಜನ ಯುವಕ ಕರಿಯ ಎಂಬವನಿಗೆ ರಸ್ತೆಯ ಬದಿಯಲ್ಲಿ ಮದುವೆ ನೆರವೇರಿಸಿದ ಅಗೌರವದ ಪ್ರಸಂಗ ನಡೆದಿದೆ.

ಮದುವೆ ನೆರವೇರಿಸಿದ, ಹರಿಕಥೆ ದಾಸರೂ ಆದ ಯಶವಂತ ಭಟ್ಟರನ್ನು ವಿಚಾರಿಸಿದಾಗ 'ಒಳಗೆ ಕಲ್ಯಾಣ ಮಂಟಪದ ಕೆಲಸಕ್ಕಾಗಿ ಎಲ್ಲಾ ಕಿತ್ತು ಹಾಕಿದ್ದೇವೆ'; 'ಒಳಗೆ ಮದುವೆ ಮಾಡಿದರೆ 140 ರೂ. ಆಗುತ್ತೆ. ಪಾಪ, ಇವರೆಲ್ಲಿಂದ ಅಷ್ಟು ಕೊಡುತ್ತಾರೆ? ಆದ್ದರಿಂದ ಎಷ್ಟು ಸಾಧ್ಯವೋ ಅಷ್ಟೇ ಕೊಡಲು ಹೇಳಿದ್ದೇನೆ'; 'ಇದು ಸರಳ ವಿವಾಹ! ಅಲ್ಲದೆ ಬೇರೆ ಯಾರ ಮದುವೆಯೂ ಹೀಗೆ ದೇವರ ಎದುರಿನಲ್ಲಿ ನಡೆಯುವುದಿಲ್ಲ. ಇವರ ಮದುವೆ ದೇವರ ಖಾಸಾ ಎದುರಲ್ಲೇ ಆಗಿರುವುದು ವಿಶೇಷ ಅಲ್ಲವಾ?' ಮುಂತಾದ ಜಾಣ ಉತ್ತರಗಳನ್ನು ಕೊಟ್ಟರು.

ನಿಜ ಸಂಗತಿ ಎಂದರೆ ಒಳಗಡೆ ಈಚೆಗೂ ಮದುವೆಗಳು ಆಗಿವೆ; ಇವರ ಹತ್ತಿರ ಮುಂಗಡವಾಗಿ 2) ರೂ., ಮದುವೆ ದಿನ ಇಪ್ಪತ್ತು ರೂ. ಒಟ್ಟು 40 ರೂ. ಪಡೆದಿದ್ದು ಎಲ್ಲರಿಗೂ ಅಷ್ಟೇ ಪಡೆಯುವುದಂತೆ (ಬಲ್ಲ ಮೂಲಗಳ ಪ್ರಕಾರ).

ಸಾಲದ್ದಕ್ಕೆ ಭಟ್ಟರ ಇನ್ನೊಂದು ವಿವರಣೆ: ಒಳಗೆಲ್ಲ ಗಣ, ಭೂತಗಳೆಲ್ಲ ಇವೆ. ಇವರು ಎಲ್ಲೆಂದರಲ್ಲಿ ತಂಬಳ-ಗಿಂಬಳ ಉಗುಳಿಬಿಡುತ್ತಾರೆ....!' 'ಮಡಿ'ಯಲ್ಲಿರುವ ಅಸ್ಪೃಶ್ಯರುಗಳಾದರೂ ವೀಳ್ಯ ಹಾಕುತ್ತಾರೆ,ಆದರೆ ಪಾಪ,ದೈವ-ದೇವರ ಬಗ್ಗೆ ನಿಜವಾದ ಭಯ ಭಕ್ತಿಯುಳ್ಳ ದಲಿತರು ಮಾತ್ರ ದೇವಸ್ಥಾನದೊಳಗೆ ವೀಳ್ಯ, ಬೀಡಿ ಇತ್ಯಾದಿ ಉಪಯೋಗಿಸಲಾರರು. ಹೀಗಿರುವಾಗ ತಾರತಮ್ಯ, ಭೇದ ಎಂದರೆ ಎಲ್ಲಿಯವರೆಗೆ!

ಯಶವಂತ ಭಟ್ಟ ಹೇಳುತ್ತಾರೆ- 'ನಾವು ಎಲ್ಲ ಸ್ಟೆಪ್ ಬೈ ಸ್ಟೆಪ್ ಮಾಡುತ್ತಿದ್ದೇವೆ!'

ಶಿವಮೊಗ್ಗ ಅಡಿಕೆ ಧಾರಣೆ

ತಾ|| 16.6.1987

ಸರಕು : 4700 - 5379
ಬೆಟ್ಟೆ : 2960 - 3600
ಗೊರಬಲು: 920 - 1029

ಸಾಗರ ಅಡಿಕೆ ತಾ|| 19.6.1987

ಇಡಿ ಅಡಿಕೆ ರೂ. 2026-2279
ಆಪಿ ರೂ. 4289-4699
ಚಾಲಿ ರೂ. 1239-1470
ಸಿಪ್ಪೆ ಗೋಟಿ ರೂ. 425-625
ಮೆಣಸು ರೂ. 5340-5540

ಸಕಲೇಶಪುರ ಏಲಕ್ಕಿ ಧಾರಣೆ

ದಿನಾಂಕ	ಗರಿಷ್ಠ	ಸರಾಸರಿ
2-6-87	225	133
3-6-87	225	153
5-6-87	259	151

ವೇದಿಕೆ

ಬಹಿಷ್ಕಾರ, ಪ್ರಾಯಶ್ಚಿತ್ತ, ಅಸ್ಪೃಶ್ಯತೆ-ಜಾತೀಯತೆ.... ಇತ್ಯಾದಿ: ಒಂದು ಸಂವಾದ

ಓದುಗರ ಪ್ರತಿಕ್ರಿಯೆಗಳು

1. ಭಾರತೀಯ ಸನಾತನ ಧರ್ಮವೂ ಈಗಿನ 'ಹಿಂದೂ' ಧರ್ಮವೂ

ಪ್ರಿಯ ಸಂಪಾದಕರೆ,

ನಿಮ್ಮ ಕುಟುಂಬದ ಮೇಲೆ ನಡೆದ ಮಾನಸಿಕ ದೌರ್ಜನ್ಯದ ಕಥೆ ಓದಿದೆ. ಇದಕ್ಕೆ, "ಜನಸೇವೆಯೇ ಜನಾರ್ದನ ಸೇವೆ" ಮುಂತಾದ ಖಾದೀಧಾರಿ, ಕಾವಿ ಧಾರಿಗಳ ಬಂಡವಾಳವಾಗಿ ಬೊಬ್ಬೆಯ ವಸ್ತುವಾಗಿರುವ 'ಸೇವಕ' (ಶೂದ್ರ) ವರ್ಗದಿಂದ ಬಂದ ನನ್ನಂಥವರ ಅಭಿಮತಕ್ಕಿಂತಲೂ ಬ್ರಾಹ್ಮಣ ಜಾತಿಯ ಯುವಕರ ಪ್ರತಿಕ್ರಿಯೆ ಅತಿ ಮುಖ್ಯ. ಏಕೆಂದರೆ ಈ ಸಮಾಜದ ಸೇವೆಯೇ ನಮ್ಮ ಜೀವನದ ಗುರಿ– ಇದು ಮನುಸ್ಮೃತಿಯಲ್ಲಿ ನಮಗೆ ವಿಧಿಸಿರುವ ಕಟ್ಟು ಕಟ್ಟಳೆ. ಇದನ್ನು ನಾವು ಸ್ವೀಕರಿಸಿದ್ದೇವೆ. ಆದರೆ ಈ ಶೂದ್ರ ವರ್ಗದಲ್ಲಿ ಸುಧಾರಣೆ ಹಿಂದಿನಿಂದಲೂ ಇದೆ. ಜಾತಿ ಬಹಿಷ್ಕಾರ ಯಾವತ್ತೋ ನಿಂತಿದೆ. ವಿಧವಾ ವಿವಾಹ ಹಿಂದಿನಿಂದಲೂ ಜಾರಿಯಲ್ಲಿತ್ತು. ಮೇಲು ಜಾತಿ ಇದನ್ನು ಸುಧಾರಣೆಯ ಹೆಸರಲ್ಲಿ ಈಗಷ್ಟೇ ಸ್ವೀಕರಿಸುತ್ತಿದೆ. ಜಾತಿಯ ಕೋಟೆಯಿಂದ ಹೊರಬರಲು ಸ್ವಲ್ಪ ಒದ್ದಾಡುತ್ತಾ ಇದೆ. ಇದು ಕ್ರಮೇಣ ಹೊರ ಬಂದೀತು.

ಆದರೆ ಒಟ್ಟು ಹಿಂದೂ ಧರ್ಮದ ದೃಷ್ಟಿಯಿಂದ ನೋಡಿದರೆ ತೀವ್ರ ಅಧಃಪತನದತ್ತ ಮುನ್ನುಗ್ಗುತ್ತಿರುವ ಭಾರತೀಯರಿಗೆ ಇತಿಹಾಸ ಪಾಠ ಕಲಿಸದಿರುವುದು ವಿಷಾದನೀಯ. ಅದೇನೇ ಇದ್ದರೂ ಈ ದೇಶಕ್ಕೆ ಮೊಗಲರು, ಬ್ರಿಟಿಷರು ಬಂದು ಆಡಳಿತ ನಡೆಸದೇ ಇದ್ದಿದ್ದರೆ ಬಹುಶಃ ನಮ್ಮಂತಹ ತುಳಿಯಲ್ಪಟ್ಟ ವರ್ಗ ಇನ್ನೂ ಪಶುಬಾಳು ಬಾಳುತ್ತಲೆ ಇರುತ್ತಿತ್ತು. ನಮ್ಮಂತಹ ವರ್ಗಗಳ ಉದ್ಧಾರಕ್ಕೆ ಭಗವಂತ ನಿಜವಾಗಿಯೂ ಅವತಾರವೆತ್ತಿದ್ದರೆ(?!) ಆ ಅವತಾರ ಈ ದೇಶಕ್ಕೆ ಬಂದ ಅನ್ಯಧರ್ಮೀಯರೆಂದೇ ಹೇಳಬೇಕು.

ಅದೇ ರೀತಿ ನಿಮ್ಮಲ್ಲಿ 'ಉತ್ತಮರ' ಕಪಿ ಮುಷ್ಟಿಯಿಂದ ಹೊರ ಬರಬೇಕಾದರೆ ತಮ್ಮಲ್ಲಿಯ ಸುಧಾರಣಾವಾದಿ ಮನೋಭಾವದ ಬಂಡುಕೋರ ಯುವಕರ ಒಂದು ತಂಡವೇ ಖಂಡಿತ ಬೇಕು. ಕೊನೆಯ ಪಕ್ಷ ಇನ್ನೊಬ್ಬರ ವೈಯಕ್ತಿಕ ವಿಷಯಕ್ಕೆ ಅವರ ಮಾನಸಿಕ ಸ್ಥಿತಿಯ ಮೇಲೆ ಹಲ್ಲೆ ಮಾಡುವುದನ್ನು ಪ್ರತಿಭಟಿಸುವಷ್ಟರ ಮಟ್ಟಿಗಾದರೂ ಇದು ಬೇಕು. ಅದಿಲ್ಲದೆ **'ಹೊರಗಿನವರು'** ಆದ ನಾವು ಏನೇ ಹೇಳಿದರೂ ಅದು 'ಇನ್ನೊಬ್ಬರ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ' ಅನ್ನಿಸಿಕೊಂಡೀತು.

ಯಾರಿಗೆ ತಾವು ಬದಲಾವಣೆಗೊಳ್ಳಬೇಕು, ಬದಲಾವಣೆಗೊಳ್ಳುವ ಪ್ರಕೃತಿಯ ನಿರಂತರ ಕ್ರಿಯೆಗೆ ಸ್ಪಂದಿಸಬೇಕು ಎಂಬ ಇಷ್ಟ ಇಲ್ಲವೋ, ಅವರ ಬಗ್ಗೆ ಏನೂ ಮಾಡಲು ಸಾಧ್ಯವಿಲ್ಲ. ಇದು ಎಲ್ಲಾ ಜಾತಿ, ವರ್ಗ, ಧರ್ಮಕ್ಕೂ ಅನ್ವಯಿಸುವ ಮಾತು. ಆದರೂ ಇಂದಲ್ಲದಿದ್ದರೆ ನಾಳೆ ಪ್ರಕೃತಿಯ ಈ **'ಚರ ವೃತ್ತಿ'** ಹಾಡಿಗೆ ಸ್ಪಂದಿಸಲೇ ಬೇಕು. ಆದ್ದರಿಂದ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ನಾನು ನಮ್ಮ ಧಾರ್ಮಿಕ ವ್ಯವಸ್ಥೆಯ ಸಂಕ್ಷಿಪ್ತ ಸಮೀಕ್ಷೆಯನ್ನು ಮಾತ್ರ ಇಲ್ಲಿ ಮಾಡಬಲ್ಲೆ.

ಪ್ರಪಂಚದ ಇತಿಹಾಸದಲ್ಲಿ ನಮ್ಮ ದೇಶದಷ್ಟು ದೀರ್ಘಕಾಲ ಅನ್ಯರ ತುಳಿತಕ್ಕೆ ಸಿಕ್ಕಿದ ರಾಷ್ಟ್ರ ಬೇರೊಂದಿಲ್ಲ ಎನ್ನಬಹುದು. ಈ ದೇಶದ ಇತಿಹಾಸ ನೀಡಿದಷ್ಟು ಜಾತಿಗಳು ಹಾಗೂ ಕೆಳವರ್ಗದ ಮೇಲೆ ಮಾಡಿದಷ್ಟು ದೌರ್ಜನ್ಯ ಬೇರೆಲ್ಲೂ ನಡೆದಿರಲಿಕ್ಕಿಲ್ಲ. ಇದರ ಕೀರ್ತಿ ಬಹುಶಃ ಇದಕ್ಕೆಲ್ಲಾ ಕಾರಣ ಕರ್ತನಾಗಿ, ಈ ಶ್ರೇಷ್ಠರನ್ನು ಹಾಗೂ ಶ್ರೇಷ್ಠತೆಯನ್ನು ಪೋಷಿಸುವ ಮನುಸ್ಮೃತಿಯನ್ನು ರಚಿಸಿ, **ಮಾನವ ದೌರ್ಜನ್ಯದ ಪರಮಾನಗಿಯ ಸಂವಿಧಾನವನ್ನು** ನೀಡಿದ ಧರ್ಮಶಾಸ್ತ್ರದ ಜನಕನಾದ ಮನುವಿಗೆ ಸಲ್ಲಬೇಕು. ಬಹುಶಃ 'ಸನಾತನಿ'ಗಳು ನಂಬುವ ಇಹ–ಪರಗಳು ಇರುವುದಾದರೆ, ಯಮಧರ್ಮನ ರೌರವ ನರಕದಲ್ಲಿ ಇಂದಿಗೂ ಮನು ಒದ್ದಾಡುತ್ತಾ ಕಠಿಣ ಶಿಕ್ಷೆಯನ್ನು ಅನುಭವಿಸುತ್ತಾ ಇರಬಹುದು. **ಈ ದೇಶದ ಜಾತೀಯತೆ ಕೊನೆಗೊಂಡಂದು ಅವನಿಗೆ ನರಕದಿಂದ ಬಿಡುಗಡೆ** ಎಂದಿರಬಹುದು.

"ನಾವೆಲ್ಲ ಒಂದು, ನಾವೆಲ್ಲ ಬಂಧು, ನಾವೆಲ್ಲ ಹಿಂದು" ಎಂದು ವೇದಿಕೆಯಿಂದ ಬೊಬ್ಬೆ ಹೊಡೆಯುವ ಈ ಹಿಂದೂ ಜನೋದ್ಧಾರಕರು ಇಂದಿಗೂ ಇಂತಹ ಸ್ಮೃತಿಯ ಪೋಷಕರಾಗಿರುವುದು ಹಾಗೂ ಇದರ ವಿರುದ್ಧ ಧ್ವನಿ ಎತ್ತದಿರುವುದನ್ನು ನೋಡಿದರೆ ನಮ್ಮ ಧರ್ಮದ ಬಗ್ಗೆ ಜಿಗುಪ್ಸೆ ಬರುತ್ತದೆ. "ಅನ್ಯ ಧರ್ಮದ ತುಳಿತಕ್ಕೆ ಸಿಕ್ಕ ಹಿಂದೂ ಧರ್ಮ" ಎಂದು ಬೊಬ್ಬಿಡುವ. ಹಾಗೂ ಅನ್ಯಧರ್ಮ ಇಲ್ಲಿ ಯಾಕ ಬಂತು, ನಮ್ಮ ಸಹೋದರರು ಅನ್ಯ ಧರ್ಮ ಯಾಕೆ ಸೇರಿದರು ಎಂಬುದನ್ನು ವಿವೇಚಿಸದೆ "ಬಲಾತ್ಕಾರದ ಮತಾಂತರ" ಎಂದು ಆತ್ಮ ವಂಚನೆಯ ಹೇಳಿಕೆಗಳನ್ನು ಕೊಡುತ್ತಾ ತಾವು ದೊಡ್ಡ ಹಿಂದೂ ಜನೋದ್ಧಾರಕರೆಂದು ಸೋಗು ಹಾಕುವ ಈ ಮಂದಿಯ ಬಗ್ಗೆ, ಅವರ ಈ 'ಧರ್ಮ ಕೇಂದ್ರ'ಗಳ ಬಗ್ಗೆ, ಮಠಾಧಿಪತಿಗಳ ಬಗ್ಗೆ ವಾಕರಿಕೆ ಬರುತ್ತದೆ.

'ಸಹನಾವವತು ಸಹನೌ ಭುನಕ್ತು....' ಎಂದು ಶ್ಲೋಕ ಹೇಳಿ ಕರೆ ಕೊಡುತ್ತಾ ತಾನು ಮಾತ್ರ ಅಂತರ್ಯದಲ್ಲಿ ಅದರ ವಿರುದ್ಧ ಇರುತ್ತಾ; "ಲೋಕಾಃ ಸಮಸ್ತಾಃ ಸುಖಿನೋ ಭವಂತು".... ಎಂದು ಹೇಳುತ್ತಾ ತಮ್ಮ ಸುಖ ಮಾತ್ರ ಯೋಚಿಸುವ ಈ ಮಂದಿಗೆ, ಈಗ ಸಮಾಜದ ಮೇಲಿನ ತಮ್ಮ ಹಿಡಿತ ದುರ್ಬಲವಾಗುತ್ತಿರುವುದನ್ನು ಕಂಡು, ಸಿರಿಮನೆಯಂತಹ ದಿಟ್ಟ ಸವಾಲುಗಳು ಎದುರು ಬಿದ್ದಿರುವುದನ್ನು ಕಂಡು ಗುಂಡಿಗೆ ಅದರುತ್ತಿರಬೇಕು ಎಂದು ಅನಿಸುತ್ತದೆ.

ಸಹಸ್ರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಚಾರ್ವಾಕನಿಂದ ಹಿಡಿದು ಅಂಬೇಡ್ಕರ್‌ವರೆಗೆ ಸುಧಾರಣಾವಾದಿಗಳು ಹುಟ್ಟಿ ಬಂದರೂ, ರಕ್ತ ಬೀಜಾಸುರರ ವಂಶದವರಾದ ಈ ಉತ್ತಮರೆಂದು ಕರೆದುಕೊಳ್ಳುವ ಮಂದಿ, ಕಾಣದ ಲೋಕದ ಸುಖವನ್ನು ಸ್ತ್ರೀಗೆ ಹಾಗೂ ಅವಳಂತೆ ತುಳಿತಕ್ಕೊಳಗಾದ ಜಾತಿಗಳ ಜನರಿಗೆ ತೋರಿಸಿ, ತಾವು ಮಾತ್ರ ಕಾಣುವ ಪ್ರಪಂಚದ ಸುಖಗಳನ್ನು ದೋಚಿಕೊಂಡವರು. ಸುಧಾರಣೆಯನ್ನು ರಾಜ ಮಹಾರಾಜರುಗಳ ಕಾಲದಲ್ಲಿ ಅವರ ಕೈಯಿಂದಲೇ ವಿರೋಧಿಸಿ ಧಾರ್ಮಿಕ ಬಂಡಾಯವನ್ನು ಅಡಗಿಸಿ ಧರ್ಮದ ಹೆಸರಿನಲ್ಲಿ ಸಮಾಜವನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡವರು. ಇಲ್ಲಿಗೆ ಗ್ರೀಕರು, ಯವನರು, ಬ್ರಿಟಿಷರ ದಾಳಿಗಳ ನಂತರ ರಾಜ ವ್ಯವಸ್ಥೆಗಳು ಕುಸಿದು ಅದು ಸ್ಥಿರವಲ್ಲವೆಂದು ತಿಳಿದ ನಂತರ ಮಠ ಮಂದಿರಗಳನ್ನು ಸ್ಥಾಪಿಸಿಕೊಂಡು ಇಡೀ ಭಾರತೀಯ ಸನಾತನ ಸಮಾಜವನ್ನೆ ಅದರಡಿಗೆ ತಂದು ಪುನಃ ವ್ಯವಸ್ಥಿತವಾಗಿ ಯೋಜಿತ ರೀತಿಯಲ್ಲಿ ತಮ್ಮ ಹಿಡಿತಕ್ಕೆ ತೆಗೆದುಕೊಂಡವರು.

ಬುದ್ಧದೇವನು ರಾಜಮನೆತನದಲ್ಲಿ ಹುಟ್ಟಿ ಸಮತಾವಾದ, ಸಮಾಜವಾದವನ್ನು ಎರಡೂವರೆ ಸಾವಿರ ವರ್ಷಗಳ ಹಿಂದೆಯೇ ಪ್ರಾರಂಭ ಮಾಡಿದಾಗ ರಾಜ ಮಹಾರಾಜರ ಬೆಂಬಲ ಬೌದ್ಧ ಧರ್ಮಕ್ಕೆ ಸಿಕ್ಕಿದಾಗ ಗಾಬರಿಗೊಂಡ ಈ ಪಟ್ಟಭದ್ರ ಹಿತಾಸಕ್ತಿಗಳು ಧರ್ಮ ರಕ್ಷಣೆ, ಪರಧರ್ಮ ಸಹಿಷ್ಣುತೆ ಮುಂತಾದ ನೆಪಗಳ ಮೂಲಕ ರಾಜಾಧಿಕಾರವನ್ನೂ ಮೀರಿ ಮಠ ಮಂದಿರಗಳ ಮೂಲಕ ಸರ್ವಾಧಿಕಾರವನ್ನು ಸ್ಥಾಪಿಸಿದರೆಂದೇ ಹೇಳಬಹುದು. ಸದಾ ಬಾಯಿಯಲ್ಲಿ ಶಾಂತಿ ಮಂತ್ರವನ್ನು ಹೇಳುತ್ತಾ ಶಾಂತಿ ಮಂತ್ರದ ಹರಿಕಾರ ಬುದ್ಧನ ಧರ್ಮವನ್ನು ಅವನ ಕಾಲಾನಂತರ ಇಲ್ಲಿಂದ ಓಡಿಸುವಲ್ಲಿ ಸಫಲವಾದರು. ಈ ಬೌದ್ಧಧರ್ಮಕ್ಕೆ ಹೊರನಾಡಿನ ಬಹು ಜನರು ಮಾನ್ಯತೆ ನೀಡಿ ಸ್ವೀಕರಿಸಿ ಗೌರವ ನೀಡಿದ್ದರೆ, ನಾವು ಅದನ್ನು ಓಡಿಸಿದ್ದು!

ನಮ್ಮ ಸಂಸ್ಕೃತಿಯ ಕೇಂದ್ರಗಳಾದ ದೇವಾಲಯಗಳಲ್ಲಿ ಅತಿಯಾದ ಲೈಂಗಿಕತೆಯ ಶಿಲ್ಪಗಳೇ ತುಂಬಿ, ದೇವರ ಹೆಸರಿನಲ್ಲಿ ದೇವದಾಸಿ ಪದ್ಧತಿ ಇಂದಿಗೂ ಇರುವುದು ನಮ್ಮ ಪಟ್ಟಭದ್ರ ಹಿತಾಸಕ್ತ ಮೇಲ್ವರ್ಗವಾದ ಈ ಜನರ ನೀಚ ಬುದ್ಧಿಗೆ ಸಾಕ್ಷಿ

ನಮ್ಮ ಜನರಿಗೆ ಈ ಮಠಗಳ ಹುಚ್ಚು ಎಷ್ಟು ತೀವ್ರವಾಗಿದೆ ಎಂದರೆ ಜಾತಿಗೊಂದು ಮಠ ಹಾಗೂ ಗುರುಗಳು ಎಂಬಂತೆ ಇದ್ದಾರಲ್ಲದೆ, ಗುರು ಇಲ್ಲದ ಜಾತಿಯೊಂದರ ವಿದ್ಯಾವಂತ ಮುಖಂಡರೊಬ್ಬರು ಪತ್ರಿಕೆಗಳಲ್ಲಿ "ನಮ್ಮ ಜಾತಿಗೂ ಒಬ್ಬ ಗುರು ಹಾಗೂ ಮಠ ಅವಶ್ಯ ಬೇಕು" ಅನ್ನುವಷ್ಟರ ಮಟ್ಟಿಗೆ ಬಂದಿದೆ! **ಇದು ನಮ್ಮ ಮಠಗಳು, ಗುರುಗಳು ತಮ್ಮ ಜಾತೀಯ ಪರಿಧಿಯನ್ನು ಬಿಟ್ಟು ಹೊರಬರಲಾರದ ಸ್ಥಿತಿ ತಲುಪಿರುವುದಕ್ಕೆ ಸಾಕ್ಷಿ. ಇವರಿಂದ ಇಡೀ ಹಿಂದೂ ಸಮಾಜ ಏನು ನಿರೀಕ್ಷಿಸಬಹುದು?** ಸಿರಿಮನೆಯವರಿಗೆ ನೀಡಲಾದ ಈ ಬಹಿಷ್ಕಾರದಂತಹ ಕ್ರಮಗಳ ಕರ್ಮಗಳನ್ನು ಮಾತ್ರ ಇವರಿಂದ ನಿರೀಕ್ಷಿಸಬಹುದು. ಅಷ್ಟೆ ತಾನೆ?

ವಿಜ್ಞಾನ, ಕ್ರೀಡೆ, ರಾಜಕೀಯ ಮುಂತಾದ ಅನೇಕ ರಂಗಗಳಲ್ಲಿ ಪ್ರಪಂಚದ ಬೇರೆ ದೇಶಗಳೆಲ್ಲ ಮುನ್ನಡೆ ಸಾಧಿಸಿದ್ದರೂ ನಾವು ಹಿಂದಿರುವುದು ಸಾಲದೆ, "ನಾವು ವೇದ ಹಾಗೂ ಪುರಾಣ ಕಾಲದಲ್ಲೇ ಮುಂದುವರಿದಿದ್ದೆವು; ವಿಮಾನ ನಮ್ಮಲ್ಲಿ ಆಗಲೇ ಇತ್ತು; ಚಂದ್ರಲೋಕಕ್ಕೆ ನಮ್ಮ ಋಷಿಮುನಿಗಳು ಹೋಗಿದ್ದರು; ಹನುಮಂತ, ಭೀಮ ಮುಂತಾದ ವೀರರಾದ "ವರ್ಲ್ಡ್ ಚಾಂಪಿಯನ್" ಗಳು ಪುರಾಣ ಕಾಲದಲ್ಲೇ ನಮ್ಮಲ್ಲಿ ಇದ್ದರು" ಮುಂತಾಗಿ ನಿರ್ಲಜ್ಜೆಯಿಂದ ವಾದಿಸುವ ಈ ಮಂದಿಗಳು, "ಪೂರ್ಣಮದ ಪೂರ್ಣಮಿದಂ.... ಈಶಾವಾಸ್ಯಮಿದಂ ಸರ್ವಂ...." ಮುಂತಾದ ಉಪನಿಷತ್ತಿನ ಉದಾತ್ತ ವಿಚಾರಗಳನ್ನು ಮರೆತು, ಹಾದಿಗೊಂದು ದೇವರು, ಜಾತಿಗೊಂದು ಮಠ, ಹೊಸ ಹೊಸ ಅವತಾರ ಪುರುಷರನ್ನು ಸೃಷ್ಟಿಸಲು ಹೊರಟಿರುವುದನ್ನು ನೋಡಿದರೆ ನಾವು ಎಂತಹ ಅಧಃಪತನಕ್ಕೆ ಇಳಿಯುತ್ತಿದ್ದೇವೆ ಎಂದೆನಿಸುತ್ತದೆ.

(3ನೇ ಪುಟಕ್ಕೆ)

2. ಮನಸ್ಸಿಗೆ ಕಂಡಂತೆಲ್ಲಾ ಬರೆದು....

ಮಾನ್ಯರೇ,

ತಮ್ಮ 7.6.87ರ ಪತ್ರಿಕೆಯಲ್ಲಿ ಪ್ರಕಟವಾದ "ಅವರ ಶಿಷ್ಯ ಮಂಡಳಿಯ ಮುಖಂಡರೆನ್ನಿಸಿಕೊಂಡವರು" ಎಂತ ಬರೆದುದನ್ನು ಓದಿ ಬೇಸರವಾಯ್ತು. ನಾನೂ ಅವರ ಶಿಷ್ಯ ಮಂಡಲಿಯ ಒಬ್ಬ ಮುಖಂಡನೇ. ನಿಮಗೆ ತೊಂದರೆ, ಅನ್ಯಾಯ ಆಗಿದ್ದರೆ ನ್ಯಾಯಾಲಯಕ್ಕೆ ಮೊರೆ ಹೋಗಿರಿ.

ನಿಮ್ಮ ತಿಳುವಳಿಕೆಗಿಂತ ಶ್ರೀ ಶ್ರೀಗಳವರ ತಿಳುವಳಿಕೆ ಬಹಳ ಮೇಲಿದೆ. ನೀವು ಹಾಕಿದಂಥ ಕನ್ನಡಕ ಹಾಕಿಕೊಂಡು ಮನಸ್ಸಿಗೆ ಕಂಡಂತೆಲ್ಲಾ ಬರೆದು ಪತ್ರಿಕೆ ನಡೆಸಿ ಜೀವನ ನಾವು ಹೊರೆಯಬೇಕಾದ್ದಿಲ್ಲ.

—**ಕಾವಳಿ ಲಕ್ಷ್ಮೀ ನಾರಾಯಣಪ್ಪ,**
ಶಾನುವಳ್ಳಿ.

3. ಜೀವನದ ಮಹತ್ವ ಅರಿತು ಪ್ರೀತಿಯಿಂದ ಬದುಕಲಾರೆವೆ?

ಗೆಳೆಯರೆ,

"ಹೆತ್ತ ಮಕ್ಕಳಿಗೆ ತಂದೆಯ ಮನೆಯಿಂದಲೇ ಬಹಿಷ್ಕಾರ"ಕ್ಕೆ ಪ್ರತಿಕ್ರಿಯೆ ಇದು.

ಇಂಥದು ಪ್ರತಿ ದಿನವೂ ಒಂದಿಲ್ಲೊಂದು ರೀತಿಯಲ್ಲಿ ನಮ್ಮ ಸಮಾಜದಲ್ಲಿ ನಡೆಯುವಂಥದೇ ಆಗಿದೆ. ಜನರು ತಮ್ಮ ಜಾತಿ, ಪ್ರಾಂತ್ಯ ಎಂಬ ಸಂಕುಚಿತ ಭಾವನೆಗಳ ಕೋಟಲೆಗಳಿಂದ ಹೊರಬಂದು **ಜೀವನದ ಮಹತ್ವವನ್ನು ಅರಿತುಕೊಂಡು, ಪ್ರೀತಿಯಿಂದ ಪರಸ್ಪರ ಪೂರಕವಾಗಿ** ಜೀವಿಸುವುದನ್ನು ನಾವು ಎಂದಿಗೆ ನೋಡುತ್ತೇವೋ? ಬಹುಶಃ ಎಂದಿಗೂ ನೋಡುವುದೇ ಇಲ್ಲವೇನೋ!?

—**ಸುಬ್ರಹ್ಮಣ್ಯ**, ಚಿಕ್ಕಮಗಳೂರು.

ಪದ್ಯದಂಕಣ

ನೀ ಹುಚ್ಚಿಯಾಗುವೆಯಾ?

ನಿನ್ನ ಮನದೊಳಗಿನ ಭಾವನೆಗಳನ್ನು
ನಿನ್ನೊಳಗೆ ಇರಿಸು
ತೋರಿಸದಿರು ಹೊರಗದನು
ಅರಿತುಕೊಳ್ಳುವರಿಲ್ಲ ಇಲ್ಲಿ
ಅದ ಬಿಟ್ಟು,
ನಿನ್ನ ಭಾವನೆಗಳನ್ನು ಹೇಳಿ ತೋರಿಸಿ
ನೀ ಹುಚ್ಚಿಯಾಗುವೆಯಾ?
ನಿನ್ನ ಮನಸಿನ ಭಾವನೆಗಳನ್ನು ಸುಟ್ಟು
ಅದರ ಬೂದಿಯನ್ನು ನಿನ್ನ ದುಃಖದ
ಕಣ್ಣೀರಿನಲ್ಲಿ ಕದಡಿ ಕುಡಿದು ಬಿಡು.
ನಿನ್ನಲ್ಲಿರುವ ಕನಸು, ಆಸೆಗಳ
ಗೋಪುರದ ಮೇಲೆ ನಗುತ ಬಾಳುವ
ಮುಖವಾಡ ಹಾಕಿ ಬಿಡು
ಅದ ಬಿಟ್ಟು,
ನಿನ್ನ ಭಾವನೆಗಳನ್ನು ಹೇಳಿ ತೋರಿಸಿ
ನೀ ಹುಚ್ಚಿಯಾಗುವೆಯಾ?

—**ಎ. ಎನ್. ವಿಶಾಲ**

4. ಮಾನವ ಜಾತಿಗೆ ಸೇರಿಯಾರೆ?

ಹುಟ್ಟು ಬ್ರಾಹ್ಮಣರಾಗಿ, ಮಕ್ಕಳ ಒಂದು ಮಾನವೀಯ ಕೃತ್ಯಕ್ಕಾಗಿ ಬ್ರಾಹ್ಮಣ ಮಹಾಸಭೆಯವರಿಂದ ಬಹಿಷ್ಕಾರಕ್ಕೊಳಗಾಗಿದ್ದವರೊಬ್ಬರನ್ನು "ಪುನಃ ಬ್ರಾಹ್ಮಣರನ್ನಾಗಿ ಪರಿವರ್ತಿಸಿದ" ವಿಚಾರ ತಿಳಿದು ವಿಸ್ಮಯವಾಯಿತು.

ಜಾತಿ ಪದ್ಧತಿ ಯಾವುದೋ ಕಾಲಕ್ಕೆ ಆಗಿನ ಮೇಧಾವಿಗಳು ನಿರ್ಮಿಸಿಕೊಂಡ ಒಂದು ವ್ಯವಸ್ಥೆ. ನಮ್ಮ ಸಮಾಜ ಇಂದು ಅದಕ್ಕಿಂತ ಎಷ್ಟೋ ಎತ್ತರಕ್ಕೆ ಬಂದಾಗಿದೆ. ಅದು ಇಂದಿಗೆ ಹೊಂದುವಂಥ ವ್ಯವಸ್ಥೆಯಲ್ಲವಾದ್ದರಿಂದಲೇ ಅದರ ಅವಶೇಷ ಮಾತ್ರ ಉಳಿದಿದೆ, ಅಷ್ಟೇ. ಇಂದು ಇಡೀ ದೇಶದ ಬಗ್ಗೆ, ವಿಶ್ವಶಾಂತಿಯ ಬಗ್ಗೆ— ಇವೇ ಮುಂತಾಗಿ ನಮ್ಮೆಲ್ಲರನ್ನೂ ಒಟ್ಟಾಗಿ ಕಾಡುವ ವಿವಿಧ ಸಮಸ್ಯೆಗಳ ಬಗ್ಗೆ ನಾವೆಲ್ಲರೂ ಒಟ್ಟಾಗಿ ಯೋಚಿಸಬೇಕಾಗಿರುವ ಈ ಸಮಯದಲ್ಲಿ. ಮೇಲೆ ಉಲ್ಲೇಖಿಸಿದಂತಹ ಮೂಢ ನಂಬಿಕೆಯನ್ನು ಎತ್ತಿ ಹಿಡಿಯುವ ಅವೈಚಾರಿಕ ಕಾರ್ಯ ನಡೆದಿರುವುದು ವಿಚಾರವಂತ ಸಮುದಾಯವನ್ನು ಮಾತ್ರವಲ್ಲ, ಮನುಷ್ಯ ಕುಲವನ್ನೇ ನಾಚಿ ತಲೆಬಾಗುವಂತೆ ಮಾಡಿದೆ.

ಇಲ್ಲಿ ಇನ್ನೂ ಶೋಚನೀಯ ವಿಚಾರವೆಂದರೆ, ಇಂತಹ ಸಂದರ್ಭಗಳಲ್ಲಿ ನಿಜವಾದ ಧರ್ಮದ ತಿರುಳನ್ನು ಜನರಿಗೆ ತಿಳಿಯ ಹೇಳಿ ಧಾರ್ಮಿಕವಾಗಿ ಮಾರ್ಗದರ್ಶನ ನೀಡಬೇಕಾಗಿದ್ದ ಮಠಾಧೀಶರೇ ಪರೋಕ್ಷವಾಗಿ ಇದಕ್ಕೆಲ್ಲ ಕಾರಣವಾದದ್ದು ಅಥವಾ ಅದನ್ನು ತಡೆಯಲೆತ್ನಿಸದೆ ತಟಸ್ಥರಾದದ್ದು.

"ಶಂಕರಾಚಾರ್ಯ" ಸಂಸ್ಕೃತ ಸಿನೆಮಾದಲ್ಲಿ ಬರುವ ಒಂದು ಸನ್ನಿವೇಶ ಸ್ಮರಣಾರ್ಹ. ಶಂಕರಾಚಾರ್ಯರು ಅವರ ಕೆಲವು ಶಿಷ್ಯರೊಡನೆ ಪ್ರಯಾಣ ಹೊರಟಾಗ ದಾರಿಯಲ್ಲಿ ಅಡ್ಡ ಸಿಕ್ಕಿದ ಚಾಂಡಾಲನೊಬ್ಬನಿಗೆ (ಸಂಸ್ಕೃತದಲ್ಲಿ) ಆಚೆಗೆ ಹೋಗಲು ಹೇಳುತ್ತಾರೆ. ಅದ[illegible] ಕೇಳುತ್ತಾನೆ –"ಯಾವುದು ಬದಿಗೆ [illegible]ಗಬೇಕು: ಈ ಶರೀರವೋ ಆತ್ಮವೋ?" [illegible]ದು. ಆಗ ತಮ್ಮ ತಪ್ಪನ್ನರಿತ ಆ [illegible]ರು ಆ ಚಾಂಡಾಲನಿಗೆ ಸಾಷ್ಟಾಂಗ ನಮಸ್ಕರಿಸಿ ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಾರೆ.

ಇನ್ನಾದರೂ ಸಂಬಧಪಟ್ಟ ವ್ಯಕ್ತಿಗಳು ತಮ್ಮ ತಪ್ಪನ್ನು ತಿದ್ದಿಕೊಂಡು ಮಾನವ ಜಾತಿಗೆ ಸೇರಿಯಾರೆ?

—**ಹರೀಶ್ ಸುಂದರ್ ಜೋಷಿ**,
ಕೊಪ್ಪ.

ವೇದಿಕೆ

ಸನಾತನ ಧರ್ಮವೂ 'ಹಿಂದೂ' ಧರ್ಮವೂ

(2ನೇ ಪುಟದಿಂದ)

ನಾವು ಇಂದು ಆಚರಿಸುತ್ತಿರುವ 'ಹಿಂದೂ' ಧರ್ಮವೇ ಬೇರೆ, ಉಪನಿಷತ್ತುಗಳು ಹೇಳಿದ ಸನಾತನ ಧರ್ಮವೇ ಬೇರೆ ಆಗಿದೆ. ಸನಾತನ ಧರ್ಮದ ಪ್ರಾಚೀನ ದಾರಿಯಲ್ಲಿ ನಾವು ಸಾಗಿ ಬರುತ್ತಿರುವಾಗ ಎಲ್ಲೋ ಒಂದೆಡೆ ಧರ್ಮಲಂಡರ ಕೈಗೆ ಈ ಸನಾತನ ಧರ್ಮ ಸಿಕ್ಕಿ ನಮ್ಮನ್ನು ಯಶಸ್ವಿಯಾಗಿ ದಾರಿ ತಪ್ಪಿಸಲಾಯ್ತು ಅಂತ ನಮ್ಮ ಧರ್ಮವನ್ನು ಸ್ವಲ್ಪ ಅಧ್ಯಯನ ಮಾಡಿ ಚಿಂತನೆ ನಡೆಸಿದ ಯಾರಿಗಾದರೂ ಅನಿಸದಿರದು. ಇವರು ಇಷ್ಟು 'ಧರ್ಮ ರಕ್ಷಣೆಗಾಗಿ' ಯಜ್ಞ, ಯಾಗ, ಹೋಮ, ಹವನ ಮುಂತಾದ 'ಪುಣ್ಯಕಾರ್ಯ'ಗಳನ್ನು ನಡೆಸಿದರೂ ವಿಶ್ವಮಟ್ಟದಲ್ಲಿ ನಾವು ವೈಜ್ಞಾನಿಕವಾಗಿ, ಬೌದ್ಧಿಕವಾಗಿ, ದೈಹಿಕವಾಗಿ, ವೈಚಾರಿಕವಾಗಿ ಪ್ರಪಂಚದ ದೃಷ್ಟಿಯಲ್ಲಿ ಕುಬ್ಜರಾಗಿ, ಕೆಲವೊಮ್ಮೆ ಹಾಸ್ಯಾಸ್ಪದರಾಗಿ ಇರುವುದು ಇಂತಹವರ ಪಾಪದ ಫಲದಿಂದಲೇ ಇರಬೇಕೆಂದೆನಿಸುತ್ತದೆ!

21ನೇ ಶತಮಾನಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲೂ ಇಂತಹ ಬಹಿಷ್ಕಾರಗಳು, ಶುದ್ಧಿಗಳು ನಡೆಯುತ್ತಿರುವುದನ್ನು ಕಂಡರೆ ಅಸ್ಪೃಶ್ಯತೆಯ ಆಚರಣೆಯ ವಿರುದ್ಧ ಇರುವ ಕಾನೂನು ವ್ಯರ್ಥವೆಂದೆನಿಸುತ್ತದೆ. ಕೊನೇ ಪಕ್ಷ ಇನ್ನೊಬ್ಬರ ಮನೆಯ ವ್ಯವಹಾರದಲ್ಲಿ ಕೈ ಹಾಕುವ ಜಾತಿ ಮುಖಂಡರನ್ನು ನಿಯಂತ್ರಿಸುವ ಕಾನೂನನ್ನು ತರಲು ಸರ್ಕಾರವನ್ನು ಒತ್ತಾಯಿಸಬೇಕಾಗಬಹುದು. ಜಾತಿ ಬಿಟ್ಟವರ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಬೇಕು. ಅವರ ರಕ್ಷಣೆಗೆ ವಿಶೇಷ ಕಾನೂನನ್ನು ತರಲು ಒತ್ತಾಯಿಸಬೇಕು.

ಜರಿದ "ಕಟ್ಟೆ"ಯ ಕಲ್ಲು ಕೂರಿಸುತ್ತೇವೆ ಅನ್ನುವ ಈ ಜಾತೀಯವಾದಿಗಳಿಗೆ ತಾವು ನಿಂತ ನೆಲವೇ ಕಟ್ಟದ "ಕಟ್ಟೆ"ಯೊಂದಿಗೆ ಭೂಕುಸಿತಕ್ಕೆ ಸಿಕ್ಕಿರುವುದು ಇನ್ನೂ ಯಾಕೆ ಗಮನಕ್ಕೆ ಬರುತ್ತಿಲ್ಲ? ಜಾತೀಯತೆಯ ಕ್ಯಾನ್ಸರ್ ತಗಲಿರುವ ಹಿಂದೂ ಧರ್ಮ ಜರ್ಝರಿತವಾಗಿ ಮೇಲೇಳಲಾರದ ಸ್ಥಿತಿಯಲ್ಲಿದೆಯೇ? ನಾವು ಯಾಕೆ ಹೀಗಿದ್ದೇವೆ? ಹೀಗೇ ಆದರೆ ನಮ್ಮ ಅವಸಾನ ಖಚಿತ. ಆಗ....

ಬಹುಶಃ ಆಗಲೂ ಈ ಶ್ರೇಷ್ಠರು ಇನ್ನೊಂದು ಧರ್ಮಕ್ಕೆ ಹೋಗಿ ಅಲ್ಲಿ ತಮ್ಮ 'ಉತ್ತಮತೆ'ಯನ್ನು ಮೆರೆಸಲು ಪ್ರಯತ್ನಿಸಬಹುದು!

—**ಕೃಷ್ಣ ಭಂಡಾರಿ**, ಜಯಪುರ

ನರಸಿಂಹರಾಜಪುರ ತಾಲ್ಲೂಕಿನ ಮಂಡಲ ಪ್ರಧಾನರು – 3

ಮಡಬೂರು ಮಂಡಲ

ತುಡುಗಲ್ಲದ ಹುಡುಗ ಮಡಬೂರು ರಾಜ....! ರಾಜೇಂದ್ರ

ಹಾರೇಕೊಪ್ಪದ ಛೇರ್ಮನ್ ತಿಮ್ಮಯ್ಯ ಗೌಡರ ಮಗ ಎಚ್. ಟಿ. ರಾಜೇಂದ್ರನಿಗೆ ಇನ್ನೂ ಮೂವತ್ತೆರಡರ ಹುಡುಗು. ಅತಿ ಶ್ರೀಮಂತರಲ್ಲದಿದ್ದರೂ ಬಡವರಂತೂ ಅಲ್ಲದ ರೈತ ಕುಟುಂಬ. ಸಾತ್ವಿಕತೆಗೆ ಹೆಸರಾಗಿದ್ದ ತಂದೆ ಛೇರ್ಮನ್ ತಿಮ್ಮಯ್ಯ ಗೌಡರು ಸವೆಸಿದ ದಾರಿಯಲ್ಲಿ ಮಗ ನಡೆಯುತ್ತಿರುವ ಸೂಚನೆ. ಶಿವಮೊಗ್ಗ–ಮೈಸೂರುಗಳಲ್ಲಿ ವ್ಯಾಸಂಗ ಮಾಡಿ ರಾಜೇಂದ್ರ ಬಿ. ಎಸ್ಸಿ ಪದವಿ ಪಡೆದಿದ್ದಾರೆ. ಉತ್ತಮ ನಡವಳಿಕೆಗಳನ್ನು ಹೊಂದಿ ಈ ಮಂಡಲದ ಪ್ರಧಾನ ಪಟ್ಟವನ್ನೂ ಗಿಟ್ಟಿಸಿಕೊಂಡಿರುವ ರಾಜೇಂದ್ರ ತಮ್ಮ ಭವಿಷ್ಯದಂತೆ ಈ ಮಂಡಲದ ಭವಿಷ್ಯವನ್ನೂ ಉತ್ತಮಗೊಳಿಸಲೆಂದು ಹಾರೈಸುತ್ತಾ,..........

ಇದೇ ಮಡಬೂರು ಮಂಡಲದ ಮತ್ತೊಂದು ಕ್ಷೇತ್ರದ ಜನತಾ ಅಭ್ಯರ್ಥಿ ಹಿರಿಯರಾದ ಎಚ್. ಪಿ. ತಿಮ್ಮಯ್ಯ ಗೌಡರು ಗೆದ್ದು ಬಂದರೆ ಯುವಕ ರಾಜೇಂದ್ರಗೆ ಪ್ರತಿಸ್ಪರ್ಧಿ ಎಂದು ಗ್ರಹಿಸಿದ ಜನತೆ ಶತಾಯಗತಾಯ ಅವರನ್ನು ಸೋಲಿಸಿ ಮಡಬೂರು ಮಂಡಲದ ಪ್ರಧಾನ ಪಟ್ಟದ ಕಲ್ಲಿಗೆ ಎಚ್. ಟಿ. ರಾಜೇಂದ್ರರ ಹೆಸರನ್ನು ಕ್ಷೇತ್ರ ಚುನಾವಣೆಗೆ ಮುಂಚೆಯೇ ಕೆತ್ತಿದ್ದರೆಂದರೆ, ಈ ಹುಡುಗನ ಬಗ್ಗೆ ಅವರಿಟ್ಟ ನಿರೀಕ್ಷೆಗೆ ಹುಡುಗ ಒಮ್ಮೆ ಬೆಚ್ಚಿಯಾನು!

ಹಿಂದೊಮ್ಮೆ ರೈತ ಸಂಘದ ಗಾಡಿಯನ್ನು ಬಿ. ಎಸ್. ತಿಮ್ಮಯ್ಯನವರೊಡಗೂಡಿ ಬಿ. ಎಚ್. ಕೈಮರದವರೆಗೆ ಎಳೆತಂದು ಪೋಲೀಸರ ಅಡ್ಡ ಬೇಲಿಗೆ ಡಿಕ್ಕಿಹೊಡೆದು ನಂತರ ಜನತಾ ಪಕ್ಷದ ಬೇಲಿಯೊಳಗೆ ವಿಶ್ರಮಿಸಿಕೊಂಡು, ಕ್ರಮೇಣ ಜನತಾ ಮುಂದಾಳಾಗಿ ಈಗ ಈ ಮಂಡಲದ ಪ್ರಧಾನರಾಗಿ ಆಯ್ಕೆಗೊಂಡಿದ್ದರೂ ಕೂಡ ಆ ರೈತರ ಮಣ್ಣಿನ ವಾಸನೆ ಮಾತ್ರ ಹೋಗಿಲ್ಲ ಎನ್ನುವುದಂತೂ ಸಕಾಲಿಕ ಸಂತಸ.

ಈ ಮಡಬೂರು ಮಂಡಲ ಈ ತಾಲ್ಲೂಕಿನ ವಿಧಾನ ಸಭೆಯೇ ಆಗಿದೆ. ವಿರೋಧಿ ಸದಸ್ಯರುಗಳಾದ ಕಾಂಗ್ರೆಸ್ ಬಾಯಿನ ಶ್ರೀಮತಿ ವನಮಾಲ, ಶೌಕತ್ ಅಲಿ ಮೊದಲಾದ ಅರ್ಭಟಗಳನ್ನ ಸುಮ್ಮನೆ ಕುಳ್ಳಿರಿಸುವುದು ಸುಲಭ ಸಾಧ್ಯವಲ್ಲ. ಈ ರೀತಿಯ ಪರ ವಿರೋಧ, ಈ ಎಲ್ಲಾ ದಕ್ಷ–ಲಕ್ಷಣಗಳಿಂದ ಈ ತಾಲ್ಲೂಕಿನ ಉತ್ತಮ ಮಂಡಲ ಆಗುವುದರಲ್ಲಿ ಸಂಶಯವಿಲ್ಲ.

ತುಡುಗಲ್ಲದ ಹುಡುಗ ರಾಜೇಂದ್ರ ಹುಡುಗರ ಮುಂದಾಳಾಗಿರುವುದು ಸಂತಸ; ಸಂತಸದಲ್ಲಿ ಎಡಗುವುದು ಸ್ವಾಭಾವಿಕ, ಎಡಗದಂತೆ ಎಚ್ಚರ ವಹಿಸುವುದು ಸಾಂದರ್ಭಿಕ.

ಎದ್ದು ಕಾಣುವ ಕಾಲಿಗೆ ಎಡತಾಕಿದ ಒಂದು ಬಳ್ಳಿ ಎಂದರೆ— ತಾಲ್ಲೂಕಿನ ಸಣ್ಣದರಿಂದ ದೊಡ್ಡದರವರೆಗಿನ 'ಪಂಚಾತಿಕೆ' ಗಳಲ್ಲಿ ತಲೆ ತೂರುವುದು. ಇದು ಇಂದು ಎಷ್ಟು ಜೈಕಾರಕ್ಕೆ ಕಾರಣವೋ ನಾಳೆ ಅಷ್ಟೇ ಧಿಕ್ಕಾರಕ್ಕೂ....!? ಎಂದರೆ ತುಸು ಎಚ್ಚರಿಕೆ ಮಾತಾದೀತೆ?

ಈ ಮಂಡಲದಲ್ಲಿ ಮುಕ್ಕಾಲು ಭಾಗ ಅನಾವೃಷ್ಟಿಯಿಂದ ನೊಂದ ರೈತರ ಅಳಲು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಕೆರೆ–ಕಟ್ಟೆ,ಏತ ನೀರಾವರಿಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟು ರೈತರೊಂದಿಗೆ ಇನ್ನೂ ಹೆಚ್ಚಿಗೆ ಸ್ಪಂದಿಸಿದ್ದೇ ಆದರೆ ಪ್ರಧಾನರೇನು, ಮುಂದಿನ ಜಿಲ್ಲಾ ಪರಿಷತ್ತಿನ ಸದಸ್ಯತ್ವದ ಕಲ್ಲಿಗೂ ಇಂದೇ "ಎಚ್. ಟಿ. ರಾಜೇಂದ್ರ" ಎಂದು ಕೆತ್ತಬಹುದಲ್ಲವೆ!?

ಪ್ರಾಯ ಹುಡುಗಾದರೂ ಅಧಿಕಾರ ಹುಡುಗಲ್ಲ; ಅಧಿಕಾರ–ಪ್ರಾಯ ಎರಡೂ ಸೇರಿದರೆ ಪಿತ್ತವಿಕೋಪವಾಗಿ ಸವೆದ ದಾರಿ ಬಿಟ್ಟು ಸವೆಯದ ಕಲ್ಲು–ಮುಳ್ಳಿಗೆ ಗಾಡಿ ತಿರುಗುತ್ತದೆ. ಇಲ್ಲಿ ಹಾಗಾಗದೆ ರಾಜೇಂದ್ರರ ಗಾಡಿ ತಾನು ರಸ್ತೆಯಲ್ಲೇ ಮುಂಡಲ ದುದ್ದಗಲಕ್ಕೂ ನಡೆದಾಡುತ್ತದೆಂಬ ಭರವಸೆ ಹಾಗೂ ಹಾರೈಕೆ.

—**ಎಂ. ಐ. ಶ್ರೀನಿವಾಸಮೂರ್ತಿ**,
ಮೂಡುಬಾಗಿಲು

ಸ್ವಯಂ ಉದ್ಯೋಗಕ್ಕಾಗಿ ತರಬೇತಿಗೆ ಅರ್ಜಿ ಆಹ್ವಾನ

ಕೊಪ್ಪ: 1987–88 ನೇ ಸಾಲಿಗೆ ಜಿಲ್ಲಾ ಪರಿಷತ್ತಿನ ಗ್ರಾಮೀಣ ಕೈಗಾರಿಕೆಗಳ ವಿಭಾಗ ಗಿರಿಜನ ಅಭಿವೃದ್ಧಿ ಯೋಜನೆ ಮತ್ತು ವಿಶೇಷ ಘಟಕ ಯೋಜನೆಗಳಲ್ಲಿ ಸ್ವಯಂ ಉದ್ಯೋಗಿಗಳಾಗಲು ತರಬೇತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

1. ಗಿರಿಜನ ಅಭಿವೃದ್ಧಿ ಯೋಜನೆ

ಜೇನು ಕೃಷಿ: ನೆಮ್ಮಾರು ಮತ್ತು ಜಯಪುರಗಳಲ್ಲಿ; ಮರಗೆಲಸ: ಕೊಪ್ಪ, ಶೃಂಗೇರಿ, ನ. ರಾ. ಪುರ, ಮೂಡಿಗೆರೆ. ವಯೋಮಿತಿ: 18–35 ವರ್ಷ. ಅಭ್ಯರ್ಥಿಗಳು ಪರಿಶಿಷ್ಟ (ಗಿರಿಜನ) ಪಂಗಡದವರಾಗಿರಬೇಕು. ಜಾತಿ ಹಾಗೂ ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದಿರುವ ಬಗ್ಗೆ ದೃಢೀಕರಣ ಪತ್ರ ಲಗತ್ತಿಸಬೇಕು.

ನಿಗದಿತ ಅರ್ಜಿಗಳನ್ನು ತಾಲ್ಲೂಕು ಕೈಗಾರಿಕಾ ವಿಸ್ತರಣಾಧಿಕಾರಿಗಳಿಂದ ಹಾಗೂ ಜೇನು ಕೃಷಿ ಬಗ್ಗೆ ಆಯಾ ಕೇಂದ್ರದ ಜೇನು ಸಂರಕ್ಷಕರಿಂದಲೂ ಸಹ ಪಡೆಯಬಹುದು.

ಅರ್ಜಿ ಸಲ್ಲಿಸಲು ಕೊನೇ ದಿನ 30–6–87 ಸಂದರ್ಶನಗಳು ಆಯಾ ತಾ|| ಕೈ ವಿ. ಅಧಿಕಾರಿಗಳ ಕಚೇರಿಯಲ್ಲಿ ಆಯಾ ದಿನ ಬೆಳಗ್ಗೆ 11 ಗಂಟೆಗೆ. ಶೃಂಗೇರಿ: 13–7–87; ಕೊಪ್ಪ: 14–7–87, ನ.ರಾ.ಪುರ: 15–7–87. ಅರ್ಜಿಸಲ್ಲಿಸಿದ ಎಲ್ಲ ಅಭ್ಯರ್ಥಿಗಳೂ ಸಂದರ್ಶನಕ್ಕೆ ಹಾಜರಾಗಬೇಕು ಪ್ರತ್ಯೇಕ ತಿಳುವಳಿಕೆ ನೀಡಲಾಗುವುದಿಲ್ಲ.

ಜೇನು ಕೃಷಿ ತರಬೇತಿ 2 ತಿಂಗಳು, ಮರಗೆಲಸಕ್ಕೆ 6 ತಿಂಗಳು, ಶಿಷ್ಯವೇತನ ತಿಂಗಳಿಗೆ 200 ರೂ. ಮತ್ತು ಅಭ್ಯರ್ಥಿಯ ಪೋಷಕರಿಗೆ 100 ರೂ.

ಹೆಚ್ಚಿನ ವಿವರಗಳನ್ನು ಜೇನು ಸಂರಕ್ಷಕರು ಅಥವಾ ಕೈಗಾರಿಕಾ ವಿಸ್ತರಣಾಧಿಕಾರಿಗಳಿಂದ ಪಡೆಯಬಹುದು.

2. ವಿಶೇಷ ಘಟಕ ಯೋಜನೆ

ಕಸುಬುಗಳು/ಕೈಗಾರಿಕೆಗಳು: ಮುದ್ರಣ, ಮರಗೆಲಸ, ಬಿದಿರಿನ ಕೆಲಸ, ಕಮ್ಮಾರಿಕೆ, ಚರ್ಮೋದ್ಯೋಗ, ಸೈಕಲ್ ಜೋಡಣೆ ಮತ್ತು ರಿಪೇರಿ, ರೇಡಿಯೋ ರಿಪೇರಿ ಮತ್ತು ಜೋಡಣೆ, ಎಲೆಕ್ಟ್ರಿಕಲ್ ವೈರಿಂಗ್ ಮತ್ತು ಮೋಟಾರ್ ರಿವೈಂಡಿಂಗ್, ಆಟೋಮೊಬೈಲ್ ಸರ್ವಿಸಿಂಗ್, ಜನರಲ್ ಇಂಜಿನಿಯರಿಂಗ್. ಇತ್ಯಾದಿ.

ವಯೋ ಮಿತಿ 18–25 ವರ್ಷ. (ವಿಶೇಷ ಸಂದರ್ಭಗಳಲ್ಲಿ ಸಡಿಲಿಸಬಹುದು). ಅಭ್ಯರ್ಥಿಗಳು ಪ. ಜಾತಿಯವರಾಗಿದ್ದು, ಜಾತಿ ಮತ್ತು ವರಮಾನದ ದೃಢೀಕರಣ ಪತ್ರ ಲಗತ್ತಿಸಬೇಕು. ನಿಗದಿತ ಅರ್ಜಿಗಳನ್ನು ಕೈಗಾರಿಕಾ ವಿಸ್ತರಣಾಧಿಕಾರಿಗಳಿಂದ ಪಡೆದು, **30–6–87 ರೊಳಗೆ ಸಲ್ಲಿಸಬೇಕು.** ಸಂದರ್ಶನದ ತಾರೀಖುಗಳು ಮತ್ತು ನಿಯಮ ಮೇಲ್ಕಂಡಂತೆಯೇ ಇರುತ್ತವೆ.

ತರಬೇತಿಯ ಅವಧಿ 6 ತಿಂಗಳು. ಶಿಷ್ಯವೇತನ ತಿಂಗಳಿಗೆ 250 ರೂ. ಗಳು. ಹೆಚ್ಚಿನ ವಿವರಗಳನ್ನು ಕೈಗಾರಿಕಾ ವಿಸ್ತರಣಾಧಿಕಾರಿಗಳಿಂದ ಪಡೆಯಬಹುದು.

ಮೇಲ್ಪಾಲು ರಸ್ತೆ, ಫೋನ್ ಅವ್ಯವಸ್ಥೆ

ಮಾನ್ಯರೆ,

ಕೊಪ್ಪ–ಮೇಲ್ಪಾಲು–ಬಾಳೆಹೊನ್ನೂರು ರಸ್ತೆಯ ಎಮ್ಮನಹಡ್ಲು ಎಂಬಲ್ಲಿ ಹೊಸದಾಗಿ ಒಂದು ಮೋರಿ ಕಟ್ಟಿಸಿ ಮಣ್ಣು ಹಾಕಲಾಗಿದ್ದು, ಈಗ ಮಳೆಯಿಂದಾಗಿ ಅಲ್ಲಿ ಬಸ್ಸುಗಳು ಓಡಾಡಲಾರದೆ ಮೇಗರವಳ್ಳಿ ರಸ್ತೆಯಿಂದ ಸುತ್ತಿಕೊಂಡು ಓಡಾಡುತ್ತಿವೆ. ಲೋಕೋಪಯೋಗಿ ಇಲಾಖೆಯವರಿಗೆ ಈ ವಿಚಾರಗೊತ್ತಿದ್ದರೂ ಏನೂ ಕ್ರಮ ಕೈಗೊಂಡಿಲ್ಲ. ಇನ್ನಾದರೂ ಸೂಕ್ತ ಕ್ರಮ ತೆಗೆದುಕೊಂಡು, ಮಳೆಗಾಲ ಬಂದೊಡನೆ ನಮ್ಮೂರ ರಸ್ತೆಗೆ ಗ್ರಹಣ ಹಿಡಿಯುವುದನ್ನು ತಪ್ಪಿಸಬೇಕಾಗಿದೆ.

ಫೋನ್ 'ಸೌಕರ್ಯ'

ಮೇಲ್ಪಾಲು–ಬಾಳೆಹೊನ್ನೂರು ಟ್ರಂಕ್ ಲೈನು ಯಾವಾಗ ನೋಡಿದರೂ ಸರಿ ಇರುವುದಿಲ್ಲ. ನಂಬರುಗಳು ತಪ್ಪಾಗಿ ಸಿಗುತ್ತಿವೆ. ಅಲ್ಲದೆ ಇಲ್ಲಿಗೆ ಸೆಕೆಂಡರಿ ಲೈನನ್ನು ಹಾಕಿ 2 ತಿಂಗಳಾದರೂ ಇನ್ನೂ ಸಂಪರ್ಕ ಕೊಟ್ಟಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇತ್ತ ಗಮನ ಹರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಕೋರುತ್ತೇನೆ.


—ಎಂ. ವಿ ಶಂಕರ್
ಮೇಲ್ಪಾಲು

ತಿದ್ದುಪಡಿ

ನಮ್ಮ 14 6.87 ರ ಸಂಚಿಕೆಯಲ್ಲಿ "ಆಲಿಕಲ್ಲು ಮಳೆಯಿಂದ ನಷ್ಟಕ್ಕೊಳಗಾದ ಬಡ ರೈತರಿಗೆ ಪರಿಹಾರಕ್ಕೆ ಒತ್ತಾಯ" ಎಂಬ ವರದಿಯಲ್ಲಿ, 'ಮರ್ಕಲ್ ಮಂಡಲ ಪ್ರಧಾನರಾದ ಕಲಿಗೆ ಚಂದ್ರಹಾಸ ಗೌಡರು' ಎಂದು ತಿದ್ದಿ ಓದಿಕೊಳ್ಳಬೇಕಾಗಿ ವಿನಂತಿ. ತಪ್ಪಿಗಾಗಿ ವಿಷಾದಿಸುತ್ತೇವೆ.

—ಸಂ.

ಚಿರಸ್ಮರಣೆ



ಶ್ರೀ ಕೆ. ಸಿ ಶಂಕರಪ್ಪ ನಾಯಕ್, ಕೆಸಗೋಡು

ಜನನ: 1933 ಮರಣ: 29-5-1987

ಸಮಾಜದಲ್ಲಿಯೂ ಸಂಸಾರದಲ್ಲಿಯೂ ಅವಿಶ್ರಾಂತ ದುಡಿದು, ಹಲವು ಸಂಘ–ಸಂಸ್ಥೆಗಳಲ್ಲಿ ಸೇವೆಗೈದು ಎಲ್ಲರಿಗೂ ಬೇಕಾದವರಾಗಿದ್ದ ನೀವು ಅಕಾಲದಲ್ಲಿ ನಮ್ಮನ್ನಗಲಿರುವುದು ತುಂಬಲಾರದ ನಷ್ಟವಾಗಿದೆ. ನಿಮ್ಮ ಸ್ನೇಹ ಸೌಹಾರ್ದ, ಸೇವಾ ಮನೋಭಾವಗಳ ಮೇಲ್ಪಂಕ್ತಿಯೇ ನಮಗೆ ಮಾರ್ಗದರ್ಶಕ. ನಿಮ್ಮ ನೆನಪೇ ನಮಗೆ ದಾರಿದೀಪ

ಇಂತು ದುಃಖತಪ್ತರಾದ
ತಂದೆ–ತಾಯಿ, ಪತ್ನಿ, ಮಕ್ಕಳು,
ಸಹೋದರ ಸಹೋದರಿಯರು
ಮತ್ತು ಬಂಧು ವರ್ಗದವರು.

ಜಮೀನು, ಮನೆ ವಗೈರೆ ಮಾರಾಟಕ್ಕಿವೆ

ಶೃಂಗೇರಿ ತಾಲ್ಲೂಕು ನೆಮ್ಮಾರಿನ ಬಳಿ ಉತ್ತಮ ಸ್ಥಿತಿಯಲ್ಲಿರುವ 3 ಎಕರೆ 10 ಗುಂಟೆ ಅಡಿಕೆ ತೋಟ ಮತ್ತು 2 ಎಕರೆ 16 ಗುಂಟೆ ತರಿ ಒಟ್ಟು 5 ಎಕರೆ 26 ಗುಂಟೆ ಜಮೀನು ಮಾರಾಟಕ್ಕಿದೆ.

ಲಗ್ತು ಮನೆ, ಕೊಟ್ಟಿಗೆ, ಬಾವಿ, ತೋಟ, ಗದ್ದೆ ಎಲ್ಲಕ್ಕೂ ಸೇರಿ ಕಲ್ಲು ಮುಂಡು ಹಾಕಿ ಮಾಡಿದ ತಂತಿ ಬೇಲಿ ಇದೆ.

ಬಾಗಾಯ್ತಿನಲ್ಲಿ 18 ರಿಂದ 22 ಕ್ವಿಂಟಾಲು ಅಡಿಕೆ, ತರಿ ಜಮೀನಿನಲ್ಲಿ 20 ರಿಂದ 25 ಕ್ವಿಂಟಾಲು ಭತ್ತ ಆಗುತ್ತಿದೆ.

ಈ ಆಸ್ತಿ–ಸ್ವತ್ತುಗಳು ಈಗಾಗಲೇ ಭರದಿಂದ ಕಾರ್ಯ ನಡೆಯುತ್ತಿರುವ ಶಿವಮೊಗ್ಗ-ಶೃಂಗೇರಿ-ಕೆರೆಕಟ್ಟೆ–ಮಂಗಳೂರು ಮಾರ್ಗದಲ್ಲಿದ್ದು, ಬಸ್ ಮಾರ್ಗದಿಂದ ಕೇವಲ 1 ಕಿ.ಮೀ. ದೂರದಲ್ಲಿವೆ. ಶಾಲೆ, ಆಸ್ಪತ್ರೆ ಎಲ್ಲವೂ 2 ಕಿ.ಮೀ.ನೊಳಗೆ ಇರುತ್ತವೆ. ಶಿವಮೊಗ್ಗದಿಂದ ನೆಮ್ಮಾರಿಗೆ ನೇರವಾಗಿ ಬಸ್ ಸೌಕರ್ಯವಿದೆ.

ಆಸಕ್ತಿಯುಳ್ಳವರು ಈ ಕೆಳಕಂಡವರನ್ನು ಸಂಪರ್ಕಿಸಿ

ಎಚ್. ವಿ. ವಿಜಯಶಂಕರ್, ಹೊಸದೇವರಹಡ್ಲು,
ನೆಮ್ಮಾರು ಅಂಚೆ, ಶೃಂಗೇರಿ ತಾಲ್ಲೂಕು

ಶೃಂಗೇರಿ ತಾ|| ವ್ಯವಸಾಯೋತ್ಪನ್ನ ಮಾರಾಟ
ಸಹಕಾರ ಸಂಘ ನಿಯಮಿತ ಶೃಂಗೇರಿ

ಕಂಬನಿ

ನಮ್ಮ ಸಂಸ್ಥೆಯ ಸ್ಥಾಪಕ ಅಧ್ಯಕ್ಷರಾಗಿ 1949ರಿಂದ 1972 ರವರೆಗೂ ಅಧ್ಯಕ್ಷರಾಗಿದ್ದು, ಸಂಸ್ಥೆಯ ಅಭಿವೃದ್ಧಿಗೆ ಚೇತನವಾಗಿ ದುಡಿದು ಇದೀಗ ನಮ್ಮೆಲ್ಲರನ್ನು ಅಗಲಿರುವ

ಶ್ರೀಮಾನ್ ಕೆ. ಎನ್. ವೀರಪ್ಪ ಗೌಡರು

ಮಾಜಿ ಶಾಸಕರು, ಶೃಂಗೇರಿ ಕ್ಷೇತ್ರ

ಇವರಿಗೆ ಹೃತ್ಪೂರ್ವಕವಾದ ಅಂತಿಮ ಪ್ರಣಾಮಗಳನ್ನು ಸಲ್ಲಿಸುತ್ತ, ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು ಮತ್ತು ಆಡಳಿತ ಮಂಡಳಿ

ಕಾರ್ಯದರ್ಶಿ ಮತ್ತು ನೌಕರ ವರ್ಗ.

ಶ್ರದ್ಧಾಂಜಲಿ

ಮಲೆನಾಡಿನ ಮೂಲೆಯಲ್ಲಿ ಹುಟ್ಟಿ ಕಷ್ಟ–ಕಾರ್ಪಣ್ಯಗಳಲ್ಲಿ ಬೆಳೆದು, ಮಲೆನಾಡ ರೈತರ ಬದುಕಿನ ಬವಣೆಗಳನ್ನು ಅರಿತುಕೊಂಡು, ಸ್ವ ಸಾಮರ್ಥ್ಯದಿಂದ ಅಧಿಕಾರದ ಗದ್ದುಗೆಗೆ ಏರಿ, ತಮ್ಮ ಬದುಕಿನ ಕೊನೆಯವರೆಗೂ ರೈತರ ಬದುಕಿಗೆ ಬೆಳಕು ತರಲು ಶ್ರಮಿಸಿದ

ಹಿರಿಯ ರಾಜಕಾರಣಿ, ಸಮರ್ಥ ಆಡಳಿತಗಾರ

ಶ್ರೀಯುತ ಕೆ. ಎನ್. ವೀರಪ್ಪ ಗೌಡರ

ಅದಮ್ಯ ಚೇತನ ನಮಗೆಲ್ಲ ಸ್ಫೂರ್ತಿಯ ಸೆಲೆಯಾಗಲಿ
ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ,

ಭಾಗ್ಯಶ್ರೀ ಮೋಟಾರ್ಸ್

ಶೃಂಗೇರಿ

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿ.ಮನೆ ನಾಗರಾಜ್, ಅಚ್ಚು: ದೀಪಪಟಗೆ ಅಚ್ಚುಕೂಟ, ಕೊಪ್ಪ.